166

79 162

# ಮೈಸೂರ ಗೆಜೆಟ್ಟು.

ಸಂ. 39.] ಸರ್ಕಾರದಿಂದ ಪ್ರಕಾಶ ಆದ್ದು [ನಂ. 5.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 4, ಸ್ರ 1904.

## IIನೆ ಭಾಗ.

### ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್‌ಗಳು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 23ನೆ ಡಿಸೆಂಬರ್ 1903ನೆ ಇಸವಿ.

ಕೋಲಾರ ತಾಲ್ಲೂಕಿಗೆ ಸೇರಿದ ಮಾರ್ಜೆನ್ನಲ್ಲಿ ನಮೂದು ಮಾಡಿ ಇರೆತಕ್ಕ ಜೋಡಿ ಗ್ರಾಮಗಳು, ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ತಾಲ್ಲೂಕು ಅಮಲ್ದಾರರ

1. ಜೋಡಿ ಸೋಮಶಾಸ್ತ್ರಿ, ಹೊಸೂರು
2. ಜೋಡಿ ಜಯಸಂದ್ರ
3. ಜೋಡಿ ತಂಬಿಹಳ್ಳಿ

ಹೋಳೂರು ಹೋಬಳಿ, ಹುತ್ತೂರು ಹೋಬಳಿ

ಕಛೇರಿಯಲ್ಲಿ 1904ನೆ ಇಸವಿ ಫೆಬ್ರವರಿ ಮಾಹೆ 22ನೆ ತಾರೀಖಿನವತ್ತಿಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತದೆ ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

(ಹೆಚ್ಚು ತಪಶೀಲ್ ಬಗ್ಗೆ 1904ನೆ ಜನವರಿ 21ನೆ ಮತ್ತು 28ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 24-25-26ನೆ ಪೇಜು ನೋಡತಕ್ಕದ್ದು.

## ಸ್ವತ್ತಿನ [illegible]ರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 20ನೆ ಜನವರಿ 1904.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ಬೈರಸಂದ್ರದ ವಾಸುದೇವಾಚಾರ್ ವಗೈರೇರಿಂದ ಬರಬೇಕಾದ ಜಮಿರ್ಷಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಕಚೇರಿಯಲ್ಲಿ 1904ನೆ ಇಸವಿ ಮಾರ್ಚಿ ಮಾಹೆ 10ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತ್ಯೂಲ್ ಮೇರಿಗೆ 131—0—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಮಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗುಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಅತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಿದಿರುವ ಪೂರಾ ಕಂದಾಯದ ಹಣವನ್ನೂ, ಖರ್ಚಿನ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಲ್ಪ ವ್ಯತ್ಯಾಸಗಳಿಗೆ ಗವರ್ಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಆವರ ಹುಕುಮಿನ ಮೇಲೆ ಕಾರ್ನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

| ತಾಲ್ಲೂಕು. | ಹೋಬಳಿ. | ಗ್ರಾಮ. | ಬಾಕೀದಾರರ ಹೆಸರು. | ಸ್ವತ್ತಿನ ತಪ್ಪೀಲ್. ಕಟ್ಟಡಗಳು. ಕಟ್ಟಡದ ಹೆಸರು. | ಕಟ್ಟಡಗಳು. ಅಂದಾಜು ಕಿಮ್ಮತ್ತು. | ಜಮೀನು. ನಂಬರು ಅಥವಾ ಪಟ್ಟಿಯಲ್ಲಿನ ಹೆಸರು. | ಜಮೀನು. ವಿಸ್ತೀರ್ಣ ಅಥವಾ ಪಟ್ಟಿಯಲ್ಲಿನ ಬಾಬತ್ತು. | ಜಮೀನು. ನಿಸ್ಟೀರ್ಣ. | ಜಮೀನು. ಅಂದಾಜು ಕಿಮ್ಮತ್ತು. | ಸರ್ಕಾರಕ್ಕೆ ಬರಬೇಕಾದ ನೋಟಿಸು ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. |
|---|---|---|---|---|---|---|---|---|---|---|
| | | | | | ರೂ. ಆ. ಪೈ. | | | ಎ. ಗು. | ರೂ. ಆ. ಪೈ. | ರೂ. ಆ. ಪೈ. |
| ಮಾಲೂರು | ನರಸಾಪುರ | ಖಾಯಂಗುತ್ತಾ ಬೈರಸಂದ್ರ | ವಾಸುದೇವಾಚಾರ್ ವಗೈರೇರು | ... | ಚಕ್ಕುಬಂದಿ. ಪೂರ್ವಕ್ಕೆ—ಬೆಳ್ಳೂರು ಸರಹದ್ದು. ಪಶ್ಚಿಮಕ್ಕೆ—ಚಾಕರಸನಹಳ್ಳಿ ಸರಹದ್ದು. ಉತ್ತರಕ್ಕೆ—ಬೆಳ್ಳೂರು ಸರಹದ್ದು. ದಕ್ಷಿಣಕ್ಕೆ—ಬೆಳ್ಳೂರು. (ಈಮಧ್ಯೆ ಇರುವ ಪೂರಾಗ್ರಾಮು.) | | | | | 131—0—0 ಕುಳಕೃತು |

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

168

## ಸ್ಥಿರಸ್ವತ್ತಿನ ಹರಾಜು ಒಗ್ಗೆ ಕೊಡಲ್ಪಟ್ಟ ಇಸ್ತಿಹಾರ್ವ ಪ್ರಸಿದ್ಧಪತ್ರಿಕೆ.

169

ತಾರೀಖು 20ನೆ ಜನವರಿ 1904.

1. ಕಂದಾಯದ ಬಾಕೀದಾರರಾದ ಜೋಡಿ ಬೆಳ್ಳೂರು ಗ್ರಾಮದ ಗೋವಿಂದಾಚಾರ್ ವಗೈರೆಯವರಿಂದ ಬರಬೇಕಾದ ಜಮೀ ಕಂದಾಯದ ಬಾಕೀಗಾಗಿ ಇದರಡಿಸ್ಕ್ರಿಪ್ಷನ್ನುಮೂದ್ದಿಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಕಸಬೇರಿಯಲ್ಲಿ 1904ನೆ ಇಸವಿ ಮಾರ್ಚಿ ಮಾಹೆ 10ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ಧರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೆ ಸಾಲಿವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲುವೇರಿಗೆ 241—6—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೀಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದ್ರು ಜಾತಾ ಹರಾಜ್ ಜಾಬತ್ತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬ್ತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅವರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಮುಖ್ತಾರ್ಲೀಕರಾಗಿ ಸವಾಲ್ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾರ್ಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ (ಪತ್ರಿಕೆಯನ್ನು) ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ್ದ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸ್ಸಿಂಗೆದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನ ವನ್ನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬ್ರಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪ್ರತಿಕ್ಷಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡ್ರಿಪ್ಯುಟಿ ಕಮಿಷನರವರಿಂದ ಸೈ ಮೊಹರಿ ಮಾಡಲ್ಪಟ್ಟ ಬಂದ್ಯುಹರಾಜ್ ಸರಟಫಿಕೇಟಿ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿಷಯಣೆಯಲ್ಲಿಯಾಗಲೀ ಯಾ ವಿಸ್ತೀರ್ಣದಲ್ಲಿಯಾಗಲೀ ಇರುವ ಸ್ವಾಲಿತ್ಯಗಳಿಗೆ ಗವರ್ಮೆಂಟನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

| ತಾಲ್ಲೂಕು. | ಹೋಬಳಿ. | ಗ್ರಾಮ. | ಬಾಕೀದಾರರ ಹೆಸರು. | ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಳ್ಳಬಿದ ಹೆಸರು | ಲಂದಾಜು ಕಿಮ್ಮತ್ತು | ಜಮೀನು. ನಂಬರ ಎಷ್ಟಾಣಿ ಸರು ಪಟ್ಟಿಯಲ್ಲಿನ ನಂಬರು. | ವಿಸ್ತೀರ್ಣ. | ಲಂದಾಜು ಕಿಮ್ಮತ್ತು. | ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. |
|---|---|---|---|---|---|---|---|---|---|
| ಮಾಲೂರು | ನರಸಾಪುರದ ಜೋಡಿ ಬೆಳ್ಳೂರು | ಗೋವಿಂದಾಚಾರಿ ವಗೈರೆ | | | | | | | |

ಚಕ್ಕುಬಂದಿ.

ಪೂರ್ವಕ್ಕೆ —ನರಸಾಪುರದ ಸರಹದ್ದು
ಪಶ್ಚಿಮಕ್ಕೆ —ಬೈರಸಂದ್ರ ಸರಹದ್ದು
ಉತ್ತರಕ್ಕೆ — ದಿನ್ನೆ ಹೊಸಕೆಳ್ಳಿ ಸರಹದ್ದು
ದಕ್ಷಿಣಕ್ಕೆ —ಅಪ್ಪಸಂದ್ರ ಸರಹದ್ದು

(ಈ ಮಧ್ಯೆ ಇರುವ ಪೂರಾ ಗ್ರಾಮು)

| ರೂ. | ಆ. | ಪೈ. | |
|---|---|---|---|
| 240 | 6 | 4 | ಕುಳ್ಳಕ್ಕೆತ್ತು ಹೈಸಸ ಳ |
| 1 | 0 | 0 | |
| 241 | 6 | 4 | |

* ಯಾ ಬಾಕಿ ಇರುವ ಮೊಬಲಗಿಗೆ ಸದರ್ಹುನುಸಾರ ನಮೂದಿಸತಕ್ಕದ್ದು.

ಎಫ್. ಸ್ಮಿತ್,
ಡೆಪ್ಯುಟಿ ಕಮಿಷನರ್.

## ಕಡೂರು ಡಿಸ್ಟ್ರಿಕ್ಟ್.

ತಾರೀಖು 21ನೆ ಜನವರಿ 1904.

ಕಡೂರು ಡಿಸ್ಟ್ರಿಕ್ಟ್ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಈ ಕೆಳಗೆ ಕಾಣಿಸಿರುವ ದಸ್ತಾವೇಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಜೀವಾರ್ಪಾಗಿ ನಿಂತಿವೆ. ಈ ನೋಟಿಫಿಕೇಷನ್ ಪಾಯಿಷ್ ಆದ ಲಾಗಾಯಿತು ಒಂದು ತಿಂಗಳೊಳಗಾಗಿ ಅವುಗಳನ್ನು ಸಂಬಂಧಪಟ್ಟವರು ಆಯಾಯ ಸಬ್ ರಿಜಿಸ್ಟ್ರಾರುಗಳಿಂದ ವಾಪಸು ಪಡಿಯಬಹುದು. ಹಾಗೆ ಮಾಡದೆ ತಪ್ಪಿದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ 85ನೆ ಸೆಕ್ಷನ್ ಅನುಸರಿಸಿ ಸದರಿ ದಸ್ತಾವೇಜುಗಳನ್ನು ನಾಶಪಡಿಸುತ್ತೆಯಾಗಿ ಇದರಿಂದ ತಿಳಿಯಪಡಿಸಿದೆ.

| ನಂಬರ್ | ಸಬ್ ರಿಜಿಸ್ಟ್ರಿ ಆಫೀಸಿನ ಹೆಸರು. | ರಿಜಿಸ್ಟ್ರಿ ಬುಕ್ಕಿನ ಹೆಸರು. | ದಸ್ತಾವೇಜಿನ ನಂಬರು. | ದಸ್ತಾವೇಜನ್ನು ಬರೆದ ತಾರೀಖು. | ರಿಜಿಸ್ಟ್ರಿದ ಅಥವಾ ರಿಜಿಸ್ಟ್ರೇಷನ್ ನಿರಾಕರಿಸಿದ ತಾರೀಖು. | ಬರೆದುಕೊಟ್ಟವರ ಹೆಸರು ಮತ್ತು ವಿಳಾಸ. | ಬರೆಸಿಕೊಂಡವರ ಹೆಸರು ಮತ್ತು ವಿಳಾಸ. | ದಸ್ತಾವೇಜಿನ ಕಿಮ್ಮತ್ತು ಮತ್ತು ಸ್ವಭಾವ. |
|---|---|---|---|---|---|---|---|---|
| 1 | ಚಿಕ್ಕಮಗಳೂರು .. | IV | 45<br>1900—1901 | 27—3—1901 | 27—3—1901 | ಹಂಗ್ರವಳ್ಳಿ ಬೈಗೂರು ದ್ಯಾವಾ ಯಾನೆ ಹಲಿಗೆ ಉದ್ದನ ರಾಮು | ಹಂಗ್ರವಳ್ಳಿ ಶಿದ್ದೇಗೌಡರ ಮಗ ದೇವೆಗೌಡ | ನೂರು ರೂಪಾಯಿನ ನೌಕರಿ ಕರಾರು |
| 2 | ಡಿಟೋ ... | I | 963<br>1900—1901 | 22—1—1901 | 25—4—1901 | ಹಿರೇಮಗಳೂರು ಹನುಮಂತನ ಸಗನಿಗನ ಮಗ ವೈನರ್ ಸಗುನನ ಪೋಷಕಳು ತಿರುಮಲಿ | ಹಿರೇಮಗಳೂರು ದೊಡ್ಡಕರಿಯನ ಮಗ ಮಲಿಯಾ | 9 ರೂಪಾಯಿನ ಕ್ರಯ ಪತ್ರ |
| 3 | ತರೀಕೆರೆ ... | I | 672<br>1900—1901 | 26—6—1901 | 27—6—1901 | ತರೀಕೆರೆ ಉಸ್ಮಾನ್‌ಸಾಬರ ಮಗ ಫಕರುದ್ದೀನ್‌ಸಾಬ್ | ತರೀಕೆರೆ ದರಿಯು ಮುಸ್ತಾ ಸಾಬರ ಹೆಂಡತಿ ಅಮಾಷಾಬಿ | 250 ರೂಪಾಯಿಗೆ ಕ್ರಯ |
| 4 | ಡಿಟೋ ... | ಡಿಟೋ | 223<br>1901—1902 | 21—9—1901 | 21—9—1901 | ಗೊಂಡೆದಹಳ್ಳಿ ಪಟೇಲ ಪುಟ್ಟೇಗೌಡನ ಮಗ ಚಿಕ್ಕರಿಯಪ್ಪ | ಗೊಂಡೆದಹಳ್ಳಿ ಶಿದ್ಧಪ್ಪನ ಮಗ ಭಾನಿರಾಯ | 40 ಡಿಟೋ |
| 5 | ಡಿಟೋ .. | ಡಿಟೋ | 234<br>1901—1902 | 24—9—1901 | 25—9—1901 | ತೊಗರಹಂಕ್ಲು ತೆಲಗಬಣಜಿಗರ ವೆಂಕಟರಮಣಯ್ಯನ ಹೆಂಡತಿ ವೈನರ್ ವೆಂಕಟರಮಣನ ಗಾರ್ಡಿಯರ್ ಸಗನವ್ವ | ನಂದೀ ಬಟ್ಲು ಕೇಕದಾರ್ ಚನ್ನಪ್ಪನ ಮಗ ರಾಮಣ್ಣ | 500 ಡಿಟೋ |
| 6 | ಡಿಟೋ ... | ಡಿಟೋ | 282<br>1901—1902 | 21—4—1900 | 28—10—1901 | ಲಕ್ಕವಳ್ಳಿಯಲ್ಲಿರುವ ಬೆಂಕಿಪುರದ ದ್ಯಾವಣ್ಣನ ಮಕ್ಕಳು 1. ಯಲ್ಲಣ್ಣ 2. ಶಿದ್ದಣ್ಣ | ಯಡೇಹಳ್ಳಿ ಪ್ಲೀಡರ್ ಶಿವರಾಮಯ್ಯ | 100 ರೂಪಾಯಿಗೆ ಗೇಣಿ ಕರಾರು |

(ಷರಾ—ದಸ್ತಾವೇಜಿಗೆ ಹಿಂದಿನ ತಾರೀಖು ಹಾಕಿದೆ.)

169

| ಸಂ. | ಸರಿ ಬರುವ ಆಫೀಸಿನ ಹೆಸರು. | ರಿಜಿಸ್ಟ್ರಿ ಆಫೀಸಿನ ಮಟ್ಟಕ್ಕನ ಸರಿ. | ದಸ್ತಾವೇಜಿನ ಸಂಖ್ಯೆ. | ದಸ್ತಾವೇಜು ಬರೆದ ತಾರೀಖು. | | | ರಿಜಿಸ್ಟ್ರಿಯ ಆಫೀಸಿಗೆ ಸಿಕ್ಕಿದ ತಾರೀಖು. | | | ಬರೆದುಕೊಟ್ಟವರ ಹೆಸರು ಮತ್ತು ವಿವರ. | ಯಾರಿಗೆ ಬರೆದುಕೊಟ್ಟರು ಅವರ ಹೆಸರು ಮತ್ತು ವಿವರ. | ದಸ್ತಾವೇಜಿನ ಕಿಮ್ಮತ್ತು ಮತ್ತು ಸ್ವರೂಪ. |
|---|---|---|---|---|---|---|---|---|---|---|---|---|
| 16 | ನಂಜನಗೂಡ | II | 1 | 8 | 3 | 1901 | 26 | 11 | 1901 | ನಂಜನಗೂಡ ತಾಲ್ಲೂಕು ಕಣಿವೆಹಳ್ಳಿ ಗ್ರಾಮದ ಅಮ್ಮಚ್ಚಿಯಾಪ, ಬಿನ್ ಗಣಪ ದಳ್ಳಿಪಟ್ಟಿ ನಂಜಪಟ್ಟಣದ | ನಂಜನಗೂಡ ತಾಲ್ಲೂಕು ಕಣಿವೆಹಳ್ಳಿ ಗ್ರಾಮದ ಪಾಲಿನಕಟ್ಟೆ ಕೆಂಪೇಗೌಡನ ಮಗ ಬಡಪೇಗೌಡ | 200 ರೂಪಾಯಿಗೆ ಆಧಾರಪತ್ರ |
| | | | 1901—1902 | | | | | | | | | |
| 17 | ಡಿ ೦೦ | IV | 17 | 17 | 12 | 1900 | 10 | 1 | 1901 | ದಕ್ಷಿಣಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕು ಬಿಂಬುಮಾಳ ಪಲ್ಲಿಪುನ ರಂಗಪ್ಪಯ್ಯರ ಮಗ ಅನಂತಪ್ಪಯ್ಯ | ದಕ್ಷಿಣಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕು ಬಿಂಬುಮಾಳ ಪಲ್ಲಿಪುನ ನಾಗಪ್ಪಯ್ಯರ ಕಿರಿಯ ಮಗ ವಿಷ್ಣುಪ್ಪಯ್ಯನ ಮಗ ಪದ್ಮನಾಭಪ್ಪಯ್ಯಗೆ | 2,000 ರೂಪಾಯಿಗೆ ರಿಜಿಸ್ಟರ್ |
| | | | 1900—1901 | | | | | | | | | |
| 18 | ಹಿಟ್ಟಿಲೆ | IV | 25 | 16 | 8 | 1900 | 20 | 2 | 1901 | ನಂಜನಗೂಡ ತಾಲ್ಲೂಕು ಕೆಳಗಿಲರು ಗ್ರಾಮದ ತಿಮ್ಮಯ್ಯಂಗಾರಿಯ ಮಗ ಸುಬ್ಬಿಂಗಾರ | ದಕ್ಷಿಣಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕು ಬಿಂಬುಮಾಳ ಪಲ್ಲಿಪುನ ಕೇಪಗಿರಿಯಾಳಿಗರ ಮಗ ಸುಬ್ಬಾ ಡಯಾಳಿಗ | 200 ರೂಪಾಯಿಗೆ ಇಷ್ಟು ಫಸಲು ಕ್ರಯಪತ್ರ |
| | | | 1900—1901 | | | | | | | | | |
| 19 | ಯಡಿಯೂರು | I | 27 | 9 | 6 | 1901 | 7 | 1 | 1902 | ಕೊಡಗು ತಾಲ್ಲೂಕು ಬಿಳಿಗೆರಿ ಮಂಡಿ ಗಣಪತಿ ತಿಮ್ಮಪ್ಪನ ಸುಬ್ಬಯ್ಯ ಬಿನ್ ಪೂವಪ್ಪ ಇವರ ಹೆಂಡತಿ ಲಕ್ಷ್ಮಮ್ಮ | ತೀರ್ಥಹಳ್ಳಿ ತಾಲ್ಲೂಕು ಮುಂಡಪಳ್ಳಿ ಗ್ರಾಮದ ರಾಮಪ್ಪ ಬಿನ್ ಕಪ್ಪುಪ್ಪರ ಮಗ ಕಪ್ಪುಪ್ಪರ ಬಂಕರಪ್ಪುರ | 200 ರೂಪಾಯಿಗೆ ಕ್ರಯಪತ್ರ |
| | | | 1901—1902 | | | | | | | | | |
| 20 | ಕೊಡಗು | I | 89 | 16 | 10 | 1901 | 26 | 11 | 1901 | ಕೊಡಗು ತಾಲ್ಲೂಕು ಬೆಳ್ಳ ಹೋಬಳಿ ದಾಸನಕೊಪ್ಪಲಿಗೆ ನಾಗಪ್ಪನಾಯ್ಕ ಸಂಬಂಜಪ್ಪನಾಯ್ಕ | ಅಷ್ಟಗಡ ರಾಮಪ್ಪ | 308—8—0 ರೂಪಾಯಿಗೆ ಆಧಾರ ಪತ್ರ |
| | | | 1901—1902 | | | | | | | | | |
| 21 | ಹಿಟ್ಟಿಲೆ | II | .. | 19 | 4 | 1897 | 21 | 1 | 1901 | ನಂಜನಗೂಡ ತಾಲ್ಲೂಕು ಕೆಳಗಿಲರು ಗ್ರಾಮದ ರಾಮಪ್ಪಯ್ಯನ ಕೆಂಪಯ್ಯ ಶಾಬಿಂಬಪ್ಪಯ್ಯ | ನಂಜನಂಜ ಮಾಗಡಿ ಕೆಳಗಿಲರು ತಿರುಪಪ್ಪಯ್ಯ ಚಿಕ್ಕಪ್ಪಯ್ಯ ಪಟ್ಟ | 1,500 ರೂಪಾಯಿಗೆ ಬ್ರಾಹ್ಮಸ್ವರ ಪತ್ರ |

೨, ನೇಮಾಂಡಪಡೆಗೂ ಅಯ್ಯಂಗಾರ್, ಸಾಲ ಬಿಸ್ಸಿಕ್ಕೆ ರಿಜಿಸ್ಟ್ರರ್.

173

ಇಸ್ತಿಹಾರ್ನಾಮೆ.

ತಾರೀಖು 30ನೆ ಜನವರಿ 1904, ವೊಕ್ಕಾಂ ಚಿಕ್ಕಮುಗಳೂರು.

ಮೈಸೂರು ಸರ್ಕಾರದವರ ನಂಬರು 9007—ಲೆಜಿಸ್. 56, ತಾರೀಖು 11ನೆ ಡಿಸೆಂಬರ್ 1901ರ ಇಸ್ತಿಹಾರಿನ ಪ್ಯಾರಾ 5ಕ್ಕೆ ಅನುಗುಣವಾಗಿ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳಲ್ಲಿ ಚಾಲ್ತಿ ಸಾಲ್ ಮೇ ಮೊಹೆ 1ನೆ ತಾರೀಖು ಲಾಗಾಯಿತು ನವಂಬರು ಮೊಹೆ ಅಖೈರ ವರಿಗೂ ಯಾರೂ ಮೀನು ಹಿಡಿಯಕೂಡದೆಂಬದಾಗಿ ಇದರಿಂದ ವಿಧಿಸಿರುತ್ತೆ ತಿಳಿಯುವದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

---

## ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಮಿ॥ ಅರ್ಜೀ ನಂಬರ್ 239.

ಶಿವಮೊಗ್ಗ ತಾಲ್ಲೂಕು ಗಾಜನೂರ ಮಾಗಣಿ ತಟ್ಟೆಕೆರೆಯಲ್ಲಿ ವಾಸವಾಗಿದ್ದು ಮೃತಪಟ್ಟ ಬಾಬಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಸುಬ್ಬಾಯ ವೈನರ್, ಗಾರ್ಡಿಯ್ ತಾಯಿ ಗಂಗಮ್ಮ, ಮೃತಪಟ್ಟ ಸದರೀ ಬಾಬಂಣನವರಿಗೆ ಖಾನ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ತಟ್ಟೆಕೆರೆ ಸ್ಥಳದ ಸುಬ್ಬಾಯ ವೈನರ್, ಗಾರ್ಡಿಯ್ ತಾಯಿ ಗಂಗಮ್ಮನವರು, ತಟ್ಟೆಕೆರೆ ವಾಸಸ್ಥರಾಗಿ ಮೃತಪಟ್ಟ ಬಾಬಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 98—0—9 ರೂಪಾಯಿಗಳ ಸಾಲವನ್ನು ವಸೂಲ್ ಪಾಡುವದಕ್ಕೆ ಸ್ ೧೯೦೧ನೆ ಇಸವಿ VIIನೆ ನಂಬರಿ ರೆಗ್ಯುಲೇಷ್ಯನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬರಾಯ ವೈನರ್, ಗಾರ್ಡಿಯ್ ತಾಯಿ ಗಂಗಮ್ಮನ ಅರ್ಜಿಯನ್ನು 1904ನೆ ಇಸವಿ ಫೆಬ್ರವರಿ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಾಬಂಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೪ನೆ ಇಸವಿ ಜನವರಿ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೩—೧೯೦೪ನೆ ಇಸವಿ ಮಿ॥ ಅರ್ಜೀ ನಂಬರ್ 243.

ಶಿವಮೊಗ್ಗ ಕಸಬಾ ಪಾಳ್ಯದಲ್ಲಿ ವಾಸವಾಗಿದ್ದು ಮೃತಪಟ್ಟ ಅಬ್ದುಲ್‌ರಜಾಕ್ ಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರು 1ನೆ ಇಮಾಂಬಿ ಉರಫ್ ಅಮಿನಾಬಿ, ಕೋಂ ಅಬ್ದುಲ್‌ರಜಾಕ್‌ಸಾಬ್, 2ನೆ ಆಫಿಜಿಬಿ, 3ನೆ ಸಖೀನಬಿ ಮೈ॥ ಗಾ॥ 1ನೆ ಅರ್ಜೀದಾರ್, ಮೃತಪಟ್ಟ ಸದರೀ ಅಬ್ದುಲ್‌ರಜಾಕ್ ಸಾಬರಿಗೆ 1ನೆ ಇಮಾಂಬಿ ಹೆಂಡತಿಯು, 2ನೆ 3ನೆ ಯವರು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಪಾಳ್ಯ ಸ್ಥಳದ 1—2—3ನೆ ಯವರು ಪಾಳ್ಯ ವಾಸಸ್ಥರಾಗಿ ಮೃತಪಟ್ಟ ಅಬ್ದುಲ್ ರಜಾಕ್ ಸಾಬರ ಜಿಂದಗಿ ಬಗ್ಯಾಗಿ ಬರತಕ್ಕ 500—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೆ ಇಸವಿ VIIನೆ ನಂಬರಿ ರೆಗ್ಯುಲೇಷ್ಯನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಇಮಾಂಬಿ, 2ನೆ ಆಫಿಜಿಬಿ, 3ನೆ ಸಖೀನಬಿ ಇವರುಗಳ ಅರ್ಜಿಯನ್ನು ಸ್ ೧೯೦೪ನೆ ಇಸವಿ ಫೆಬ್ರವರಿ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಬ್ದುಲ್‌ರಜಾಕ್ ಸಾಬರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೪ನೆ ಇಸವಿ ಜನವರಿ ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವೆಂಕಟವರದ ಅಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

---

## ಚಿಕ್ಕಮಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಅರ್ಜೀ ನಂಬರ್ 335.

ಮೃತಪಟ್ಟ ವೆಂಕಟರಮಣಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕಡೂರು ಡಿಸ್ಟ್ರಿಕ್ಟು ಕಡೂರು ತಾಲ್ಲೂಕು ಬೀರೂರುನಲ್ಲಿರುವ ಸಾಹುಕಾರ್ ಖಿರುದೀ ಸುಬ್ಬರಾಯಪ್ಪ, ಮೃತಪಟ್ಟ ವೆಂಕಟರಮಣಯ್ಯನಿಗೆ ದತ್ತು ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಖಿರುದಿ ಸುಬ್ಬರಾಯಪ್ಪನವರ ಅರ್ಜಿಯನ್ನು ಸ್ ೧೯೦೪ನೆ ಇಸವಿ ಫೆಬ್ರವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೪ನೆ ಇಸವಿ ಜನವರಿ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.